# ಪ್ರಾರ್ಥನೆ

# ಶ್ರೀದುರ್ಗಾಚಂದ್ರಕಲಾ ಸ್ತುತಿಯಿಂದ



**ಅಭ್ಯರ್ಥನೇನ ಸರಸೀರುಹಸಂಭವಸ್ಯ**
**ತ್ಯಕ್ತ್ವೋದಿತಾ ಭಗವದಕ್ಷಿಪಿಧಾನಲೀಲಾಂ ।**
**ವಿಶ್ವೇಶ್ವರೀ ವಿಪದಪಾಗಮನೇ ಪುರಸ್ತಾ-**
**ನ್ಮಾತಾ ಮಮಾಸ್ತು ಮಧುಕೈಟಭಯೋರ್ನಿಹಂತ್ರೀ ॥ ೧ ॥**

ಬ್ರಹ್ಮದೇವನ ಪ್ರಾರ್ಥನೆಯಿಂದ ಮಹಾವಿಷ್ಣುವಿನ ಕಣ್ಣನ್ನು ಮುಚ್ಚಿಕೊಂಡಿರುವ ಲೀಲೆಯನ್ನು ಬಿಟ್ಟು ಪ್ರತ್ಯಕ್ಷಳಾದ, ಮಧು ಮತ್ತು ಕೈಟಭ ಎಂಬ ಇಬ್ಬರು ಮಹಾದೈತ್ಯರನ್ನು ಸಂಹರಿಸಿದ, ಜಗದೀಶ್ವರಿಯಾಗಿ ಜಗನ್ಮಾತೆಯಾದ ಶ್ರೀ ಮಹಾಕಾಳಿಯು ನನ್ನ ವಿಪತ್ತುಗಳನ್ನು ಪರಿಹರಿಸಲು ಮುಂದೆ ಬರಲಿ.



**ಪ್ರಾಙ್ನಿರ್ಜರೇಷು ನಿಹಿತೈರ್ನಿಜಶಕ್ತಿಲೇಶೈಃ**
**ಏಕೀಭವದ್ಭಿರುದಿತಾಖಿಲಲೋಕಗುಪ್ತ್ಯೈ ।**
**ಸಂಪನ್ನಶಸ್ತ್ರನಿಕರಾ ಚ ತದಾಯುಧಸ್ಥೈಃ**
**ಮಾತಾ ಮಮಾಸ್ತು ಮಹಿಷಾಂತಕರೀ ಪುರಸ್ತಾತ್ ॥ ೨ ॥**

ಮೊದಲು ದೇವತೆಗಳಲ್ಲಿ ಇಟ್ಟಿದ್ದ ತನ್ನ ಅಲ್ಪ ಶಕ್ತಿಗಳೆಲ್ಲ ಒಂದಾಗಿ ಸೇರಿ ಇಡೀ ಜಗತ್ತಿನ ರಕ್ಷಣೆಗಾಗಿ ಅವತರಿಸಿ, ಅವುಗಳ ಶಕ್ತಿಗಳಿಂದ ತನ್ನ ಆಯುಧಗಳ ಸಂಪತ್ತನ್ನು ವರ್ಧಿಸಿಕೊಂಡು, ಮಹಿಷಾಸುರನನ್ನು ಸಂಹರಿಸಿದ ಜಗನ್ಮಾತೆ ಶ್ರೀಮಹಾಲಕ್ಷ್ಮಿಯು ನನಗೆ ಪ್ರತ್ಯಕ್ಷಳಾಗಿ ಅನುಗ್ರಹಿಸಲಿ.



**ಪ್ರಾಲೇಯಶೈಲತನಯಾ ತನುಕಾಂತಿ ಸಂಪ-**
**ತ್ಕೋಶೋದಿತಾ ಕುವಲಯಚ್ಛವಿಚಾರು ದೇಹಾ ।**
**ನಾರಾಯಣೀ ನಮದಭೀಪ್ಸಿತ ಕಲ್ಪವಲ್ಲೀ**
**ಸುಪ್ರೀತಮಾವಹತು ಶುಂಭನಿಶುಂಭ ಹಂತ್ರೀ ॥ ೩ ॥**

ಪರ್ವತರಾಜನ ಮಗಳಾದ ಪಾರ್ವತಿಯ ದೇಹದಿಂದ ದಿವ್ಯತೇಜಸ್ಸಿನಿಂದ ವ್ಯಕ್ತಳಾಗಿ, ಕೆನ್ನೈದಿಲೆಯ ಕಾಂತಿಯಿಂದ ಬೆಳಗುವ ಮನೋಹರ ದೇಹವನ್ನುಳ್ಳ, ನಮಸ್ಕರಿಸಿ ಶರಣು ಬಂದವರ ಇಷ್ಟಾರ್ಥಗಳೆಲ್ಲವನ್ನೂ ಕರುಣಿಸುವ ಕಲ್ಪಲತೆಯಾಗಿರುವ, ಶುಂಭ ನಿಶುಂಭರೆಂಬ ರಾಕ್ಷಸರನ್ನು ನಾಶ ಮಾಡಿದ ನಾರಾಯಣೀ ಸ್ವರೂಪಳಾದ ಶ್ರೀ ಸರಸ್ವತೀದೇವಿಯು ನನ್ನಲ್ಲಿ ವಿಶೇಷವಾದ ಪ್ರೀತಿಯನ್ನು ಇಡಲಿ.

– ಅಪ್ಪಯ್ಯ ದೀಕ್ಷಿತರು

## ಸೂಕ್ತಿಪ್ರಭ

ಬೆಳಕನ್ನು ನಾವು ಹೊರಗೆಲ್ಲೂ ಕಾಣಲಾರೆವು. ಅದೆಲ್ಲ ನಮ್ಮೊಳಗೇ ಇರುವುದು. ಬೆಳಕಿನ ವ್ಯಕ್ತರೂಪವಾದ ಜಗನ್ಮಾತೆ ಪ್ರತಿಯೊಂದು ಜೀವಿಯ ಹೃದಯದಲ್ಲೂ ನೆಲೆಸಿದ್ದಾಳೆ.

–ಸ್ವಾಮಿ ಶಿವಾನಂದ

ಜಗನ್ಮಾತೆಯನ್ನು ಅರಿತಾಗ ಎಲ್ಲ ಮೋಹಗಳೂ ಮಾಯವಾಗುವುವು. ಆಗ ಜಗತ್ತು ತುಂಬ ಚಿಕ್ಕದಾಗುವುದು, ತೀರ ಕ್ಷುಲ್ಲಕವಾಗುವುದು — ಮಣ್ಣಿನ ಮುದ್ದೆಯಂತೆ.

–ಸ್ವಾಮಿ ತುರೀಯಾನಂದ

ನಾವು ಜಗನ್ಮಾತೆಯ ಸೇವಕರು ಎಂದು ಹೇಳುವುದು ಆಕೆಗೆ ಇಷ್ಟವಾಗದು. ನಾವು ಅವಳ ಮಕ್ಕಳು, ಸೇವಕರಲ್ಲ. ನೀನು ಅವಳ ಮಗುವೆಂದೇ ಯಾವಾಗಲೂ ಭಾವಿಸು.

–ಸ್ವಾಮಿ ರಾಮಕೃಷ್ಣಾನಂದ

ಎಲ್ಲದರಲ್ಲೂ ಜಗನ್ಮಾತೆ ನೆಲೆಸಿದ್ದಾಳೆ ಹಾಗೂ ವ್ಯಾಪಿಸಿಕೊಂಡಿದ್ದಾಳೆ ಎಂದೇ ನಿಶ್ಚಯವಾಗಿಯೂ ತಿಳಿದುಕೋ. ಸುಖವಾಗಲಿ, ದುಃಖವಾಗಲಿ – ಎಲ್ಲದರಲ್ಲೂ ಅವಳಿದ್ದಾಳೆ.

–ಸ್ವಾಮಿ ಸುಬೋಧಾನಂದ